ನನ್ನ ಕಾರು ಬಂಗಲೆಯ ಗೇಟಿನ ಬಳಿ ನಿಂತಾಗ ನಡುರಾತ್ರಿಯಾಗಿದ್ದಿರಬೇಕು. ಹ್ಯಾರಿ ಪೋಪ್ ಈಗಾಗಲೆ ನಿದ್ದೆ ಹೋಗಿರಬೇಕು. ಹೆಡ್‌ಲೈಟಿನ ಬೆಳಕು ಅವನ ಬೆಡ್‌ರೂಮಿನ ಕಿಟಕಿಗಳಿಗೆ ಬಡಿದು ಅವನು ಎಚ್ಚರಾಗದಿರಲೆಂದು ನಾನು ಕಾರಿನ ದೀಪಗಳನ್ನು ನಂದಿಸಿದೆ. ಆದರೆ ಇಷ್ಟೆಲ್ಲಾ ಜಾಗರೂಕತೆಯ ಅವಶ್ಯಕತೆ ಇರಲಿಲ್ಲವೆಂದು ಗೇಟು ತೆರೆದು ಒಳಹೊಕ್ಕಾಗಲೇ ಗೊತ್ತಾಯಿತು. ಹ್ಯಾರಿಯ ರೂಮಿನ ದೀಪ ಇನ್ನೂ ಉರಿಯುತ್ತಿದ್ದು, ಓದುತ್ತಾ ಓದುತ್ತಾ ಅವನಿನ್ನೂ ಮಲಗಿಲ್ಲವೆಂಬುದನ್ನು ಹೇಳುತ್ತಿತ್ತು. ಕಾರನ್ನು ನಿಲ್ಲಿಸಿ, ಕತ್ತಲಿನಲ್ಲೇ ನಾನು ಬಂಗಲೆಯ ಐದು ಮೆಟ್ಟಿಲುಗಳನ್ನು ಹತ್ತಿ ಮುಂಬಾಗಿಲನ್ನು ತೆರೆದು ಒಳಗೆ ಹೋದೆ. ದೀಪವನ್ನು ಹೊತ್ತಿಸಿ ನೇರವಾಗಿ ಹ್ಯಾರಿಯ ರೂಮಿನೆಡೆಗೆ ಹೆಜ್ಜೆ ಹಾಕಿ ಮೆಲ್ಲಗೆ ಬಾಗಿಲನ್ನು ದೂಡಿದೆ. ಹ್ಯಾರಿ ಮಂಚದ ಮೇಲೆ ಅಂಗಾತನಾಗಿ ನಿಶ್ಚಲವಾಗಿ ಬಿದ್ದುಕೊಂಡಿದ್ದ. ಕೊಂಚವೂ ಅಲುಗಾಡುತ್ತಿರಲಿಲ್ಲ ಮತ್ತು ಅವನು ನನ್ನ ಕಡೆಗೆ ತಿರುಗಿಯೂ ನೋಡಲಿಲ್ಲ.

'ಟಿಂಬರ್! ಬಾ ಇಲ್ಲಿ!!' ನಾಲಗೆಯ ಸ್ವಾಧೀನ ಕಳಕೊಂಡವನಂತೆ ಅವನು ಅಸ್ಪಷ್ಟವಾಗಿ ಗುಟ್ಟು ಹೇಳುವವನಂತೆ ಕರೆದ.

ನಾನು ಬಾಗಿಲನ್ನು ಸಂಪೂರ್ಣವಾಗಿ ತೆರೆದು ಅವನೆಡೆಗೆ ಧಾವಿಸಿದೆ.

'ಟಿಂಬರ್, ಅಲ್ಲೇ ನಿಲ್ಲು!...' ಎಂದ ಆತಂಕದಿಂದ.

ಅವನು ಏನು ಹೇಳುತ್ತಿದ್ದಾನೆಂದೇ ನನಗೆ ಗೊತ್ತಾಗಲಿಲ್ಲ.

'ಏನು ಸಮಾಚಾರ ಹ್ಯಾರಿ?' ನಾನು ಗಾಬರಿಗೊಂಡು ಕೇಳಿದೆ.

'ಶ್ಶ್!... ಶಬ್ದ ಮಾಡಬೇಡ! ಮುಂದೆ ಬರುವ ಮುನ್ನ ನಿನ್ನ ಶೂಗಳನ್ನು ಬಿಚ್ಚು... ದಯವಿಟ್ಟು ಏನೂ ಮಾತನಾಡಬೇಡ. ನಾನು ಹೇಳಿದಂತೆ ಕೇಳು.'

ಅವನು ಮಾತನಾಡುತ್ತಿರುವ ಧಾಟಿ ಕೇಳಿದಾಗ ನನಗೆ ಒಮ್ಮೆಲೇ ಜಾರ್ಜ್ ಬರ್ಲಿಂಗನ ನೆನಪಾಯಿತು. ಎರಡನೇ ಮಹಾಯುದ್ಧದ ಸಮಯ. ಎರಡೂ ಕೈಗಳನ್ನು ಹೊಟ್ಟೆಯ ಮೇಲಿಟ್ಟು ಒಂದು ಮರದ ಪೆಟ್ಟಿಗೆಯನ್ನು ಒರಗಿನಿಂತಿದ್ದ ಜಾರ್ಜ್ ಹೀಗೆಯೇ ಪುಸಪುಸ ಎಂದು ಏನೋ ಅಸ್ಪಷ್ಟವಾಗಿ ಮಾತನಾಡುತ್ತಿದ್ದ. ಜರ್ಮನರು ಹೊಡೆದ ಎರಡು ಗುಂಡುಗಳು ಅವನ ಹೊಟ್ಟೆಯನ್ನು ಹೊಕ್ಕಿದ್ದವೆಂದು ನಂತರ ಗೊತ್ತಾಯಿತು.

'ಬೇಗ ಟಿಂಬರ್. ಶೂ ಕಳಚಿ ಹಾಕು.'

ನಾನು ಶೂಗಳನ್ನೇಕೆ ಕಳಚಬೇಕೆಂದು ನನಗೆ ಅರ್ಥವಾಗಲಿಲ್ಲ. ಆದರೂ ಅವನ ಸಮಾಧಾನಕ್ಕೆ ಕಳಚಿಟ್ಟು ಅವನ ಮಂಚದೆಡೆಗೆ ಸಾಗಿದೆ.

'ಮಂಚ ಮುಟ್ಟಬೇಡ!' ಹ್ಯಾರಿ ಶಬ್ದ ಮಾಡದೆಯೇ ಚೀರಿದ. ಅವನು ಹೊಟ್ಟೆಗೆ ಗುಂಡು ಹೊಡೆಸಿಕೊಂಡ ಜಾರ್ಜ್‌ನ ಹಾಗೆಯೇ ಮಾತನಾಡುತ್ತಿದ್ದ. ನಾನು ಗಾಬರಿಗೊಂಡು ಅಂಗಾತನಾಗಿ ಬಿದ್ದುಕೊಂಡಿದ್ದ ಅವನ ಮೇಲೆ ಒಮ್ಮೆ ದೃಷ್ಟಿ ಹರಿಸಿದೆ. ಎದೆಯವರೆಗೆ ಅವನು ಹೊದ್ದುಕೊಂಡಿದ್ದ. ಅದಕ್ಕಿಂತ ಮೇಲೆ ಅವನ ನೀಲಿ ಬಿಳಿ ಪಟ್ಟೆಯ ನೈಟ್‌ಡ್ರೆಸ್ ಕಾಣಿಸುತ್ತಿತ್ತು. ಅವನು ಬೆವರಿ ಸಂಪೂರ್ಣವಾಗಿ ತೊಯ್ದು ಹೋಗಿದ್ದ. ಅಂದು ರಾತ್ರಿ ತಾಪಮಾನ ಕೊಂಚ ಹೆಚ್ಚಾಗಿಯೇ ಇತ್ತು. ನಾನೂ ಬೆವರುತ್ತಿದ್ದೆ. ಆದರೆ ಹ್ಯಾರಿ ತುಸು ಜಾಸ್ತಿಯೇ ಬೆವರಿದ್ದ. ಅವನ ತಲೆದಿಂಬು ಕೂಡ ತೊಯ್ದು ಹೋಗಿತ್ತು. ಅವನಿಗೆ ಮಲೇರಿಯ ಆಗಿರಬಹುದೆಂದು ನಾನು ಭಾವಿಸಿದೆ.

'ನಿನಗೆ ಏನಾಯ್ತು ಹ್ಯಾರಿ?' ನಾನು ಅವನ ಧಾಟಿಯಲ್ಲೇ ಶಬ್ದ ಮಾಡದೆ ಕೇಳಿದೆ.